(3)

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016–17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಗ್ರಾಮೀಣ ಪ್ರದೇಶಗಳಲ್ಲಿರುವ ಸಣ್ಣ ಪ್ರಮಾಣದ ವಿದ್ಯುತ್ ಮಗ್ಗಗಳ ಘಟಕಗಳಿಗೆ 50% ಸಹಾಯಧನದೊಡನೆ ಸೌರಶಕ್ತಿ ಉಪಕರಣಗಳ ಮಂಜೂರಾತಿಗಾಗಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ.
1. 2016–17 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣ (ಕಂಡಿಕೆ–381)
2. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ:ಕೈಜಇ/ಜವಳಿ/ಎ–1/ಹೊ.ಯೋ/2016–17, ದಿ: 13.05.2016 ಮತ್ತು 27.07.2016.
3. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಇಂಧನ ಇಲಾಖೆ, ಇವರು ಹಿಂಬರಹ ನೀಡಿದ ದಿನಾಂಕ: 23.06.2016.

Office of the Commissioner For Textiles ... Bangalore
420

*********

ಪ್ರಸ್ತಾವನೆ:

ಓದಲಾದ (1) ರಂತೆ, 2016–17 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ನೇಕಾರರ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮವನ್ನು ಪ್ರಸ್ತಾಪಿಸಲಾಗಿದೆ.

**"ಗ್ರಾಮೀಣ ಪ್ರದೇಶಗಳಲ್ಲಿರುವ ಸಣ್ಣ ಪ್ರಮಾಣದ ವಿದ್ಯುತ್ ಮಗ್ಗಗಳ ಘಟಕಗಳಿಗೆ 50% ಸಹಾಯಧನದೊಡನೆ ಸೌರಶಕ್ತಿ ಉಪಕರಣಗಳ ನೀಡಿಕೆ".**

ಓದಲಾದ (2)ರ ಜವಳಿ ಅಭಿವೃದ್ಧಿ ಆಯುಕ್ತರ ಪತ್ರಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ನಿರಂತರ ವಿದ್ಯುತ್ ಸರಬರಾಜು ಇಲ್ಲದೇ ಇರುವುದರಿಂದ ರಾಜ್ಯದ ವಿದ್ಯುತ್ ಮಗ್ಗದ ನೇಕಾರರು ನೇಯ್ಗೆ ಕೆಲಸ ಮಾಡಿ ಅವರ ಜೀವನಕ್ಕಾಗಿ ಅವಶ್ಯವಿರುವ ಹಣವನ್ನು ಗಳಿಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಅವರ ಆರ್ಥಿಕ ಸ್ಥಿತಿ ಉತ್ತಮವಾಗಿರುವುದಿಲ್ಲ. ರಾಜ್ಯದ ವಿದ್ಯುತ್ ಸಮಸ್ಯೆಯಿಂದ ನೇಕಾರರನ್ನು ಬಿಡುಗಡೆಗೊಳಿಸಿ ನೇಕಾರರ ಕುಟುಂಬವು ಆರ್ಥಿಕವಾಗಿ ಸಭಲಗೊಳಿಸುವ ಸಲುವಾಗಿ ಸೌರಶಕ್ತಿ ಉಪಕರಣಗಳನ್ನು ಸರ್ಕಾರದಿಂದ ಶೇ. 50 ರಷ್ಟು ರಿಯಾಯಿತಿ ದರದಲ್ಲಿ ಒದಗಿಸಬಹುದಾಗಿದ್ದು, ಈ ಉದ್ದೇಶಿತ ಕಾರ್ಯಕ್ರಮದಿಂದ ವಿದ್ಯುತ್ ಸರಬರಾಜು ಕೊರತೆ ಇರುವ ಗ್ರಾಮೀಣ ಪ್ರದೇಶಗಳಲ್ಲಿ ಸೌರಶಕ್ತಿ ಉಪಕರಣವನ್ನು ನೇಕಾರರು ಕಡಿಮೆ ದರದಲ್ಲಿ ಖರೀದಿಸಿ ಉಪಯೋಗಿಸಬಹುದಾಗಿದ್ದು, ಹಾಗೂ ದಿನದಲ್ಲಿ ಕನಿಷ್ಠ 8 ಗಂಟೆಗಳ ಕಾಲ ನೇಕಾರರು ನಿರಂತರವಾಗಿ ನೇಯ್ಗೆ ಕಸುಬು ಮಾಡಲು ಸಾಧ್ಯವಾಗುವುದರಿಂದ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಹುದಾಗಿದ್ದು, ಈ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.

ಓದಲಾದ (3)ರಲ್ಲಿ ಈ ಯೋಜನೆಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಅನುಷ್ಠಾನಗೊಳಿಸಲು ಇಂಧನ ಇಲಾಖೆಯ ಆಕ್ಷೇಪಣೆ ಇರುವುದಿಲ್ಲವೆಂದು ಸಹಮತಿ ನೀಡಲಾಗಿರುತ್ತದೆ.

ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 30 ಜಕೈಯೋ 2016 ಬೆಂಗಳೂರು, ದಿನಾಂಕ: 23.08.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲಿ, ಕೈಮಗ್ಗ ಮತ್ತು ಜವಳಿ ಇಲಾಖೆಯ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ ಅಡಿ, 2016-17 ನೇ ಸಾಲಿನಿಂದ ಗ್ರಾಮೀಣ ಪ್ರದೇಶಗಳಲ್ಲಿರುವ ಸಣ್ಣ ಪ್ರಮಾಣದ ವಿದ್ಯುತ್ ಮಗ್ಗಗಳ ಘಟಕಗಳಿಗೆ 50% ಸಹಾಯಧನದೊಡನೆ ಸೌರಶಕ್ತಿ ಉಪಕರಣಗಳ ನೀಡಿಕೆ ಯೋಜನೆಯನ್ನು ಕೆಳಕಂಡ ಷರತ್ತಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1. ಈ ಯೋಜನೆಯ ಸೌಲಭ್ಯವನ್ನು ಪಡೆಯಲು ಗ್ರಾಮೀಣ ಪ್ರದೇಶದ ವಿದ್ಯುತ್ ಮಗ್ಗ ನೇಕಾರರು ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಸಂಸ್ಥೆಯಲ್ಲಿ ನೊಂದಾಯಿಸಿಗೊಳ್ಳತಕ್ಕದ್ದು.
2. ಸೌರಶಕ್ತಿ ಉಪಕರಣಗಳನ್ನು ಗ್ರಾಮೀಣ ಪ್ರದೇಶದ ನೇಕಾರರು ಖರೀದಿಸಲು ಶೇ. 50 ರಷ್ಟು ಸಹಾಯಧನವನ್ನು ನೀಡಲಾಗುವುದು.
3. 2016-17ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನಕ್ಕೆ ಒಳಪಟ್ಟು ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
4. ಈ ಯೋಜನೆಯನ್ನು ಪ್ರಾರಂಭಿಸುವ ಮುನ್ನ ಕೈಮಗ್ಗ ಮತ್ತು ಜವಳಿ ಇಲಾಖೆಯು ಅಗತ್ಯ ಇರುವ ಎಲ್ಲಾ ತಾಂತ್ರಿಕ ಸಮಸ್ಯೆಗಳ (Technical Issues) ಬಗ್ಗೆ ಗಮನಹರಿಸತಕ್ಕದ್ದು.
5. ಸೌರಶಕ್ತಿ ಉಪಕರಣಗಳ ಸರಬರಾಜುದಾರರಿಗೆ, ಉಪಕರಣಗಳ ಗುಣಮಟ್ಟ, ಕಾರ್ಯಕ್ಷಮತೆ, ವಾರ್ಷಿಕ ನಿರ್ವಹಣೆಯ ಕಾಲಾವಧಿಯ ಬಗ್ಗೆ ಸೂಕ್ತ ನಿಭಂದನೆಗಳನ್ನು ವಿಧಿಸತಕ್ಕದ್ದು.
6. ಸೌರಶಕ್ತಿ ಉಪಕರಣಗಳ ಕಾರ್ಯಕ್ಷಮತೆಯಲ್ಲಿ ನ್ಯೂನತೆಗಳು ಕಂಡು ಬಂದಲ್ಲಿ ಸರಬರಾಜುದಾರರಿಗೆ ದಂಡ ವಿಧಿಸುವ ಹಾಗೂ ಸೌರಶಕ್ತಿ ಉಪಕರಣಗಳನ್ನು ಬದಲಾಯಿಸುವ / ಬಳಸುವ ಕುರಿತು ಸೂಕ್ತ ತರಬೇತಿ ಹಾಗೂ ಮಾಹಿತಿಯನ್ನು ನೇಕಾರರಿಗೆ ಒದಗಿಸುವ ಬಗ್ಗೆ ಸೌರಶಕ್ತಿ ಉಪಕರಣಗಳನ್ನು ಸರಬರಾಜು ಮಾಡುವ ಸಂಸ್ಥೆಯೊಂದಿಗೆ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ನಿಗಮವು ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು.

ಈ ಯೋಜನೆಗೆ ತಗಲುವ ವೆಚ್ಚವನ್ನು 2016-17ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ ಲೆಕ್ಕ ಶೀರ್ಷಿಕೆ: 2851-00-103-0-62 (ಯೋಜನೆ) ಅಡಿಯಲ್ಲಿ ಹಂಚಿಕೆ ಮಾಡಲಾದ ಅನುದಾನದಲ್ಲಿ ಗರಿಷ್ಠ ರೂ. 500.00 ಲಕ್ಷಗಳನ್ನು ಮಾತ್ರ ವೆಚ್ಚ ಭರಿಸತಕ್ಕದ್ದು.

ಜವಳಿ ಅಭಿವೃದ್ಧಿ ಆಯುಕ್ತರ ಪರಿವೀಕ್ಷಣೆ ಮತ್ತು ಸಲಹೆಯೊಂದಿಗೆ ಅನುಬಂಧದಲ್ಲಿ ಲಗತ್ತಿಸಿರುವ ಯೋಜನೆಯ ಮಾರ್ಗಸೂಚಿಯಂತೆ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಸೌರಶಕ್ತಿ ಯಂತ್ರೋಪಕರಣಗಳ ಖರೀದಿಯನ್ನು ಪಾರದರ್ಶಕ ನಿಯಮ ಕೆ.ಟಿ.ಪಿ.ಪಿ ಕಾಯ್ದೆಯಂತೆ ಹಾಗೂ ಮಾರ್ಗಸೂಚಿಯಂತೆ ನಡೆಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 14 ಎಫ್‌ಆರ್‌ಓ 2016, ದಿನಾಂಕ: 12.08.2016 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 218 ವೆಚ್ಚ-1/2016, ದಿನಾಂಕ: 10.06.2016 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

Office of the Commissioner for Textiles
No.
Date.
Bangalore

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಬೋರಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ರಾಜ್ಯ ಸಂಕಲನಕಾರರು, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು,

ಪ್ರತಿ:

1. ಮಹಾಲೇಖಪಾಲರು, (ಲೆಕ್ಕ ಪತ್ರ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ-ವೆಚ್ಚ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
6. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ-ನಿಗಮ ನಿ., 6ನೇ ಮಹಡಿ, ಡಿ.ಜೆ.ಸಿ. ಸಂಕೀರ್ಣ, ಒಕ್ಕಲಿಗರ ಭವನ, ಕಿತ್ತೂರು ರಾಣಿ ಚೆನ್ನಮ್ಮ ವೃತ್ತ, ಬೆಂಗಳೂರು-560 027
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ., ಪ್ರಿಯದರ್ಶಿನಿ ನೇಕಾರರ ಭವನ, ಹಲಸೂರು, ಬೆಂಗಳೂರು.

..4

9. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, 3ನೇ ಮಹಡಿ, ವಿಧಾನಸೌಧ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ. ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ–1, ವಿಧಾನ ಸೌಧ, ಬೆಂಗಳೂರು.
12. ಸಹಾಯಕ ನಿರ್ದೇಶಕರು, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಕೊಠಡಿ ಸಂಖ್ಯೆ: 19, ನೆಲಮಹಡಿ ವಿಧಾನ ಸೌಧ, ಬೆಂಗಳೂರು.
13. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
14. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು.
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

## ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವತಿಯಿಂದ ವಿದ್ಯುತ್ ಮಗ್ಗ ಘಟಕಗಳಿಗೆ ಸೋಲಾರ್ ಉಪಕರಣ ಅಳವಡಿಕೆ ಯೋಜನೆಯ ಮಾರ್ಗಸೂಚಿ

**ಸಂಖ್ಯೆ: ವಾಕೈ 30 ಜಕೈಯೋ 2016, ದಿನಾಂಕ: 23.08.2016**

2016–17ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿರುವ ಸಣ್ಣ ಪ್ರಮಾಣದ ವಿದ್ಯುತ್ ಮಗ್ಗದ ನೇಕಾರರು ನಿರಂತರ ವಿದ್ಯುತ್ ಸರಬರಾಜು ಇಲ್ಲದೇ ಇರುವುದರಿಂದ ರಾಜ್ಯದ ವಿದ್ಯುತ್ ಮಗ್ಗದ ನೇಕಾರರು ನೇಕಾರಿಕೆಯಿಂದ ಅವರ ಜೀವನಕ್ಕಾಗಿ ಅವಶ್ಯವಿರುವ ಹಣವನ್ನು ಗಳಿಸಲು ಸಾಧ್ಯವಾಗುತ್ತಿಲ್ಲದ ಕಾರಣ ಇವರ ವರಮಾನದ ಮಟ್ಟವನ್ನು ಹೆಚ್ಚಿಸಲು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ನೇಕಾರರ ವಿಶೇಷ ಪ್ಯಾಕೇಜ್‌ಯಡಿ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ನಿಗಮದ ಮೂಲಕ ಕಾರ್ಯಕ್ರಮವನ್ನು ಜಾರಿಗೊಳಿಸಲು ಹಾಗೂ ಯೋಜನೆ ಅಡಿ ಅನುದಾನ ಬಿಡುಗಡೆ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನಗಳ ಮಾರ್ಗಸೂಚಿಯನ್ನು ಈ ಕೆಳಕಂಡಂತೆ ಹೊರಡಿಸಲಾಗಿದೆ.

### ಯೋಜನೆಗೆ ಅವಶ್ಯವಿರುವ ಮೂಲಭೂತ ಸೌಲಭ್ಯಗಳು

1. ಕನಿಷ್ಠ 2 ರಿಂದ 6 ವಿದ್ಯುತ್ ಮಗ್ಗಗಳನ್ನು ಅಳವಡಿಸುವಷ್ಟು ಸೂಕ್ತ ಸ್ಥಳಾವಕಾಶವಿದ್ದು ಕಟ್ಟಡವು ಸಿಮೆಂಟ್ ಶೀಟ್/ಆರ್‌ಸಿಸಿ ಛಾವಣಿಯಿಂದ ಕೂಡಿರತಕ್ಕದ್ದು.
2. ಈ ಯೋಜನೆಯನ್ನು ಗ್ರಾಮೀಣ ಪ್ರದೇಶದಲ್ಲಿನ ವಿದ್ಯುತ್ ಮಗ್ಗ ಘಟಕಗಳಿಗೆ ಮಾತ್ರ ಅನುಷ್ಠಾನಗೊಳಿಸತಕ್ಕದ್ದು.

### ಯೋಜನೆಯ ತಾಂತ್ರಿಕ ವಿಶೇಷತೆಗಳು, ಯೋಜನಾ ವೆಚ್ಚ, ಬಂಡವಾಳ ಹೂಡಿಕೆ ಮತ್ತು ಹಣಕಾಸಿನ ಮೂಲ:

ಈ ಯೋಜನೆಯನ್ನು ವಿದ್ಯುತ್ ಮಗ್ಗಗಳ ವೈಯಕ್ತಿಕ ಘಟಕಗಳು ಹಾಗೂ ವಿದ್ಯುತ್ ಮಗ್ಗ ಘಟಕಗಳ ಕ್ಲಸ್ಟರ್ ಎಂಬ ಎರಡು ಮಾದರಿಯ ಘಟಕಗಳ ಉಪಯೋಗಕ್ಕಾಗಿ ಅನುಷ್ಠಾನಗೊಳಿಸಲು ರೂಪಿಸಲಾಗಿದೆ. ಈ ಎರಡೂ ಮಾದರಿಗಳಿಗೆ ತಾಂತ್ರಿಕ ವಿಶೇಷತೆಗಳು, ಯೋಜನಾ ವೆಚ್ಚ, ಬಂಡವಾಳ ಹೂಡಿಕೆ ಮತ್ತು ಹಣಕಾಸಿನ ಮೂಲಗಳ ವಿವರ ಇಂತಿದೆ.

**1. ವಿದ್ಯುತ್ ಮಗ್ಗ ಹೊಂದಿರುವ ವೈಯಕ್ತಿಕ ಘಟಕಗಳ ತಾಂತ್ರಿಕ ವಿಶೇಷತೆ:–**

1) ತಾಂತ್ರಿಕವಾಗಿ ಒಂದು ಸಾದಾ ವಿದ್ಯುತ್ ಮಗ್ಗಕ್ಕೆ ಕನಿಷ್ಠ 1.00 ಕಿಲೋ ವ್ಯಾಟ್ ವಿದ್ಯುತ್ ಸಾಮರ್ಥ್ಯ ಹೊಂದಿರತಕ್ಕದ್ದು.
2) 2.00 ಕಿಲೋ ವ್ಯಾಟ್ ಸಾಮರ್ಥ್ಯದ ಉಪಕರಣವು 2 ರಿಂದ 3 ಮಗ್ಗಗಳಿಗೆ ಅಗತ್ಯವಿರುವ ವಿದ್ಯುತ್ ಒದಗಿಸುವ ಸಾಮರ್ಥ್ಯ ಹೊಂದಿರುತ್ತದೆ. ಹಾಗೆಯೇ 4.00 ಕಿಲೋ ವ್ಯಾಟ್

ಸಾಮರ್ಥ್ಯದ ಉಪಕರಣವು 4 ರಿಂದ 6 ಮಗ್ಗಗಳಿಗೆ ಅವಶ್ಯವಿರುವ ವಿದ್ಯುತ್ ಒದಗಿಸುವ ಸಾಮರ್ಥ್ಯ ಹೊಂದಿರತಕ್ಕದ್ದು.

3) ಈ ಯೋಜನೆಯಲ್ಲಿ ಕನಿಷ್ಠ 2 ಹಾಗೂ ಗರಿಷ್ಠ 6 ವಿದ್ಯುತ್ ಮಗ್ಗಗಳ ಘಟಕಗಳಿಗೆ ಸೌರವಿದ್ಯುತ್ ಉಪಕರಣಗಳನ್ನು ಒದಗಿಸಲಾಗುತ್ತದೆ. 2.00 ಕಿಲೋ ವ್ಯಾಟ್ ಸಾಮರ್ಥ್ಯದಿಂದ 4.00 ಕಿಲೋ ವ್ಯಾಟ್ ಸಾಮರ್ಥ್ಯದ ಉಪಕರಣಗಳು ಅವಶ್ಯವಿರುತ್ತದೆ

4) 2.00 ಕಿಲೋ ವ್ಯಾಟ್ ಸೋಲಾರ್ ಉಪಕರಣದ ಅಂದಾಜು ವೆಚ್ಚ ರೂ.3.00 ಲಕ್ಷ ಇರುತ್ತದೆ. ಹಾಗೂ 4.00 ಕಿಲೋ ವ್ಯಾಟ್ ಸೋಲಾರ್ ಉಪಕರಣದ ಅಂದಾಜು ವೆಚ್ಚ ರೂ.5.00 ಲಕ್ಷದ ಮಿತಿಯೊಳಗೆ ಇರತಕ್ಕದ್ದು.

ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿರುವ 2-6 ವಿದ್ಯುತ್ ಮಗ್ಗಗಳನ್ನು ಹೊಂದಿರುವ ಸಣ್ಣ ಪ್ರಮಾಣದ ವಿದ್ಯುತ್ ಮಗ್ಗ ಘಟಕಗಳಿಗೆ 2.00 ರಿಂದ 4.00 ಹೆಚ್‌ಪಿ ವರೆಗಿನ ಸಾಮರ್ಥ್ಯದ ಸೋಲಾರ್ ವಿದ್ಯುತ್ ಉಪಕರಣಗಳನ್ನು ಒದಗಿಸಲಾಗುವುದು. ಒಂದು ಸೋಲಾರ್ ಘಟಕದ ಯೋಜನಾ ಅಂದಾಜು ವೆಚ್ಚವು ಕೆಳಗಿನಂತೆ ಇರುತ್ತದೆ.

| ವಿವರ | ಘಟಕ ವೆಚ್ಚ ರೂ. | ಸಹಾಯಧನ ರೂ. | ಫಲಾನುಭವಿ ವಂತಿಗೆ ರೂ. |
|---|---|---|---|
| 2 ಕಿಲೋ ವ್ಯಾಟ್ ಸೋಲಾರ್ ಉಪಕರಣ (ಕನಿಷ್ಠ 2 ರಿಂದ 3 ಮಗ್ಗಗಳ ನಿರ್ವಹಣೆ) | 3.00 ಲಕ್ಷ | 1.50 ಲಕ್ಷ | 1.50 ಲಕ್ಷ |
| 4 ಕಿಲೋ ವ್ಯಾಟ್ ಸೋಲಾರ್ ಉಪಕರಣ (ಕನಿಷ್ಠ 4 ರಿಂದ 6 ಮಗ್ಗಗಳ ನಿರ್ವಹಣೆ) | 5.00 ಲಕ್ಷ | 2.50 ಲಕ್ಷ | 2.50 ಲಕ್ಷ |

ಎಲ್ಲಾ ವರ್ಗದ ಫಲಾನುಭವಿಗಳಿಗೆ ಯೋಜನಾ ವೆಚ್ಚದ ಶೇ.50 ರಷ್ಟು ಹಣವನ್ನು ಯೋಜನೆಯಡಿ ಸಹಾಯಧನವಾಗಿ ಒದಗಿಸಲಾಗುವುದು. ಉಳಿದ ಹಣವನ್ನು ಫಲಾನುಭವಿಗಳು ತಮ್ಮ ವಂತಿಗೆಯಾಗಿ ಒದಗಿಸಬೇಕಾಗುತ್ತದೆ. ಫಲಾನುಭವಿಗಳು ತಮ್ಮ ವಂತಿಗೆ ಹಣವನ್ನು ಇನ್ನಾವುದಾದರೂ ರೂಪದಲ್ಲಿ ಅಂದರೆ MNRE ಸಂಸ್ಥೆ / ಕೇಂದ್ರ ಸರ್ಕಾರದ ಇತರೆ ಯಾವುದೇ ಇಲಾಖೆ ಅಥವಾ ಸಂಸ್ಥೆಯ ವತಿಯಿಂದ ದೊರೆಯುವ ಸಹಾಯಧನ ಅಥವಾ ಬ್ಯಾಂಕ್ ಸಾಲ ಅಥವಾ ಸ್ವಂತ ಹೂಡಿಕೆಯಿಂದ ನಿರ್ವಹಿಸತಕ್ಕದ್ದು.

2. ವಿದ್ಯುತ್ ಮಗ್ಗ ಕ್ಲಸ್ಟರ್‌ಗಳ ತಾಂತ್ರಿಕ ವಿಶೇಷತೆ:-

1) ತಾಂತ್ರಿಕವಾಗಿ ಒಂದು ಸಾದಾ ವಿದ್ಯುತ್ ಮಗ್ಗಕ್ಕೆ ಕನಿಷ್ಠ 1.00 ಕಿಲೋ ವ್ಯಾಟ್ ವಿದ್ಯುತ್ ಸಾಮರ್ಥ್ಯದ ಅವಶ್ಯಕತೆ ಇರುತ್ತದೆ.

2) ಈ ಯೋಜನೆಯಲ್ಲಿ ಕನಿಷ್ಠ 100 ವಿದ್ಯುತ್ ಮಗ್ಗಗಳ ಘಟಕಗಳಿಗೆ ಸೌರವಿದ್ಯುತ್ ಉಪಕರಣಗಳನ್ನು ಒದಗಿಸಲಾಗುತ್ತದೆ. ಇದಕ್ಕೆ 80.00 ಕಿಲೋ ವ್ಯಾಟ್ ಸಾಮರ್ಥ್ಯದ ಉಪಕರಣಗಳು ಅವಶ್ಯವಿರುತ್ತದೆ.
3) 80.00 ಕಿಲೋ ವ್ಯಾಟ್ ಸೋಲಾರ್ ಉಪಕರಣದ ಅಂದಾಜು ವೆಚ್ಚ ರೂ.100.00 ಲಕ್ಷ ಇರುತ್ತದೆ.

ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿರುವ 2-6 ವಿದ್ಯುತ್ ಮಗ್ಗಗಳನ್ನು ಹೊಂದಿರುವ ಸಣ್ಣ ಪ್ರಮಾಣದ ವಿದ್ಯುತ್ ಮಗ್ಗ ಘಟಕಗಳನ್ನು ಹೊಂದಿರುವ ಕನಿಷ್ಠ 100 ವಿದ್ಯುತ್ ಮಗ್ಗಗಳ ಹಾಲಿ ಇರುವ ಕ್ಲಸ್ಟರ್‌ಗಳನ್ನು ಗುರುತಿಸಿ ಅಥವಾ ಹೊಸದಾಗಿ ಸ್ಥಾಪಿಸಲಾಗುವ ಮಿನಿ ಪವರ್‌ಲೂಮ್ ಪಾರ್ಕ್/ಕಾಂಪ್ಲೆಕ್ಸ್‌ಗಳಿಗೆ ಸೋಲಾರ್ ವಿದ್ಯುತ್ ಉಪಕರಣಗಳನ್ನು ಒದಗಿಸಲಾಗುವುದು. ಇವುಗಳಿಗೆ ಒಂದೇ ಕೇಂದ್ರಿಕೃತ ಸೋಲಾರ್ ಉಪಕರಣವನ್ನು ಅಳವಡಿಸಿ ವಿದ್ಯುತ್ ಸರಬರಾಜಿಗೆ ಅವಕಾಶ ಕಲ್ಪಿಸತಕ್ಕದ್ದು.

ವಿದ್ಯುತ್ ಮಗ್ಗ ಕ್ಲಸ್ಟರ್‌ನಲ್ಲಿ ಸ್ಥಾಪಿಸುವ ಒಂದು ಸೋಲಾರ್ ಘಟಕದ ಯೋಜನಾ ವೆಚ್ಚದ ವಿವರ ಈ ಕೆಳಕಂಡಂತೆ ಇರುತಕ್ಕದ್ದು.

| ವಿವರ | ಘಟಕ ವೆಚ್ಚ ರೂ. | ಸಹಾಯಧನ (ಶೇ50 ರಂತೆ) |
|---|---|---|
| 1 ಕ್ಲಸ್ಟರ್‌ಗೆ | 100.00 ಲಕ್ಷ | ಗರಿಷ್ಠ ರೂ. 50.00 ಲಕ್ಷ |

ಈ ಯೋಜನೆಯ ಅನುಷ್ಠಾನಕ್ಕೆ ಅವಶ್ಯಕತೆ ಇರುವ ಅನುದಾನದಲ್ಲಿ ಫಲಾನುಭವಿಗಳ ವರ್ಗ ಆಧರಿಸಿ ಸರ್ಕಾರದಿಂದ ಶೇ.50 ರಷ್ಟು ಸಹಾಯಧನ ದೊರೆಯುತ್ತದೆ. ಉಳಿದ ಅನುದಾನವನ್ನು ಫಲಾನುಭವಿಗಳಿಂದ ಶೇ.50 ರಷ್ಟು ವಂತಿಕೆ ಪಡೆಯುವ ಮೂಲಕ ಅನುಷ್ಠಾನಗೊಳಿಸಲಾಗತಕ್ಕದ್ದು. ಫಲಾನುಭವಿಗಳ ವಂತಿಕೆಯನ್ನು ಇನ್ನಾವುದಾದರೂ ರೂಪದಲ್ಲಿ ಅಂದರೆ MNRE ಸಂಸ್ಥೆ / ಕೇಂದ್ರ ಸರ್ಕಾರದ ಇತರೆ ಯಾವುದೇ ಇಲಾಖೆ ಅಥವಾ ಸಂಸ್ಥೆಯ ವತಿಯಿಂದ ದೊರೆಯುವ ಸಹಾಯಧನ ಅಥವಾ ಬ್ಯಾಂಕ್ ಸಾಲ ಅಥವಾ ಸ್ವಂತ ಹೂಡಿಕೆಯಿಂದ ನಿರ್ವಹಿಸಬಹುದಾಗಿರುತ್ತದೆ. ಫಲಾನುಭವಿ ವಂತಿಕೆಗೆ ಸಾಲದ ರೂಪದಲ್ಲಿ ಆರ್ಥಿಕ ಸಹಾಯ ಒದಗಿಸಲು ಕೆಲವು ಲೀಡ್ ಬ್ಯಾಂಕ್‌ಗಳು ಮುಂದೆ ಬಂದಿರುತ್ತವೆ.

**ಫಲಾನುಭವಿಗಳು ಈ ಯೋಜನೆಯ ಸೌಲಭ್ಯ ಪಡೆಯಲು ಒದಗಿಸಬೇಕಾದ ದಾಖಲೆಗಳು:**

1. ಸ್ವಂತ ವಾಸದ ದೃಢೀಕರಣ ಪತ್ರ – ಗ್ರಾಮ ಪಂಚಾಯಿತ್, ಪುರಸಭೆ, ಟೌನ್ ಪಂಚಾಯಿತ್ ಹಾಗೂ ಇತರೆ (ಮೂಲ ದಾಖಲಾತಿ ಪತ್ರಗಳು).
2. ಸ್ವಂತ ಮಗ್ಗಗಳು ಹೊಂದಿರುವ ಬಗ್ಗೆ ದಾಖಲಾತಿ (ಕೈಗಾರಿಕಾ ಲೈಸನ್ಸ್ ಅಥವಾ ಎಸ್‌ಎಸ್‌ಐ ದೃಢೀಕರಣ ಪತ್ರ) ಹೊಂದಿರತಕ್ಕದ್ದು.

...4

3. ಫಲಾನುಭವಿಗಳಿಗೆ ಸ್ವಂತ ಕಟ್ಟಡ ನಿವೇಶನವಿಲ್ಲದ ಪ್ರಕರಣದಲ್ಲಿ ಕನಿಷ್ಠ 3 ರಿಂದ 5 ವರ್ಷಗಳ ಕಾಲ ಬಾಡಿಗೆ ಕರಾರು ಪತ್ರದ ಮೂಲ ಪ್ರತಿ.
4. ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಂದ ಪಡೆದ ನಿರಾಕ್ಷೇಪಣಾ ಪತ್ರ (ಎನ್‌ಓಸಿ).

**ಫಲಾನುಭವಿಗಳ ಅರ್ಹತೆ:-**

1. ಕನಿಷ್ಠ 2 ರಿಂದ 6 ಸ್ವಂತ ವಿದ್ಯುತ್ ಮಗ್ಗಗಳ ಘಟಕ ಹೊಂದಿರತಕ್ಕದ್ದು.
2. ಮಗ್ಗಗಳನ್ನು ಹಾಗೂ ಸೋಲಾರ್ ಉಪಕರಣಗಳನ್ನು ಅಳವಡಿಸುವಷ್ಟು ಸೂಕ್ತ ಸ್ಥಳಾವಕಾಶವಿದ್ದು ಕಟ್ಟಡವು ಸಿಮೆಂಟ್ ಶೀಟ್/ಆರ್‌ಸಿಸಿ ಛಾವಣಿಯಿಂದ ಕೂಡಿರತಕ್ಕದ್ದು.

**ಯೋಜನೆ ಅನುಷ್ಠಾನಕ್ಕೆ ಅನುಸರಿಸಬೇಕಾದ ಸಾಮಾನ್ಯ ಕಾರ್ಯವಿಧಾನಗಳು:**

**1) ವೈಯಕ್ತಿಕ ಘಟಕಗಳಿಗೆ**

1. ಫಲಾನುಭವಿಗಳ ಆಯ್ಕೆಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ನಿಗಮದ ವತಿಯಿಂದ ಸುದ್ದಿ ಮಾಧ್ಯಮಗಳಲ್ಲಿ ವಿಸ್ತ್ರುತ ಪ್ರಕಟಣೆ ನೀಡತಕ್ಕದ್ದು.
2. ನಿಗದಿತ ಅರ್ಜಿ ನಮೂನೆಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಛೇರಿಗಳಲ್ಲಿ / ವಿದ್ಯುತ್ ಮಗ್ಗ ಸೇವಾ ಕೇಂದ್ರಗಳಲ್ಲಿ ಸ್ವೀಕರಿಸತಕ್ಕದ್ದು.
3. ಸ್ವೀಕೃತವಾದ ಅರ್ಜಿಗಳನ್ನು ಕ್ರೋಢೀಕರಿಸಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಪರಿಶೀಲಿಸಿ ನಿಯಮಾವಳಿಯನ್ವಯ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಹಾಗೂ ಅರ್ಜಿಗಳನ್ನು ಶಿಫಾರಸ್ಸಿನೊಂದಿಗೆ ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.
4. ನಿಗಮದಲ್ಲಿ ಈ ರೀತಿ ಸ್ವೀಕೃತಿಯಾದ ಅರ್ಜಿಗಳನ್ನು ಪರಿಶೀಲಿಸಿ ಅಂತಿಮ ಫಲಾನುಭವಿಗಳ ಪಟ್ಟಿಯನ್ನು ಪ್ರಕಟಿಸಿ ಘಟಕಗಳಿಗೆ ಸೋಲಾರ್ ಉಪಕರಣಗಳನ್ನು ಅಳವಡಿಸಲು ಮಂಜೂರಾತಿ ನೀಡಿ ಕಾರ್ಯಾದೇಶ ಹೊರಡಿಸುವ ಅಧಿಕಾರ ನಿಗಮದ ವ್ಯವಸ್ಥಾಪಕ ನಿರ್ದೇಶಕರದ್ದಾಗಿರುತ್ತದೆ.
5. ಈ ಯೋಜನೆಯ ಅವಧಿಯು ಕನಿಷ್ಠ 5 ವರ್ಷಗಳವರೆಗೆ ಇರತಕ್ಕದ್ದು ಹಾಗೂ ಯೋಜನೆಯಡಿ ಸರಬರಾಜು ಆದ ಉಪಕರಣಗಳನ್ನು ಫಲಾನುಭವಿಗಳು ಯಾವುದೇ ರೀತಿಯ ಪರಭಾರೆ ಅಥವಾ ಮಾರಾಟ ಮಾಡತಕ್ಕದ್ದಲ್ಲ. ಹಾಗೂ ಉಪಕರಣಗಳನ್ನು ಫಲಾನುಭವಿ ಮತ್ತು ನಿಗಮದ ಹೆಸರಿನಲ್ಲಿ ನೊಂದಾಯಿಸತಕ್ಕದ್ದು.

**2) ವಿದ್ಯುತ್ ಮಗ್ಗ ಕ್ಲಸ್ಟರ್‌ಗಳಿಗೆ**

1. ಫಲಾನುಭವಿಗಳ ಆಯ್ಕೆಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ನಿಗಮದ ವತಿಯಿಂದ ಸುದ್ದಿ ಮಾಧ್ಯಮಗಳಲ್ಲಿ ವಿಸ್ತ್ರುತ ಪ್ರಕಟಣೆ ನೀಡತಕ್ಕದ್ದು.
2. ಫಲಾನುಭವಿಗಳು ಸಹಕಾರ ಸಂಘ ಅಥವಾ ಅಸೋಸಿಯೇಷನ್ ಅಥವಾ ಇನ್ನಿತರ ಯಾವುದೇ ರೀತಿಯ ಸಂಘಟನೆಯನ್ನು ನೋಂದಾಯಿಸಿಕೊಂಡು ಅದರ ಮೂಲಕ

ನಿಗದಿತ ಅರ್ಜಿ ನಮೂನೆಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಛೇರಿಗಳಿಗೆ / ವಿದ್ಯುತ್ ಮಗ್ಗ ಸೇವಾ ಕೇಂದ್ರಗಳಿಗೆ ಸಲ್ಲಿಸತಕ್ಕದ್ದು.

3. ಸ್ವೀಕೃತವಾದ ಅರ್ಜಿಗಳನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಪರಿಶೀಲಿಸಿ ನಿಯಮಾವಳಿಯನ್ವಯ ಫಲಾನುಭವಿಗಳ ಪಟ್ಟಿಯೊಂದಿಗೆ ಅರ್ಜಿಗಳನ್ನು ಶಿಫಾರಸ್ಸಿನೊಂದಿಗೆ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.
4. ನಿಗಮದಲ್ಲಿ ಈ ರೀತಿ ಸ್ವೀಕೃತಿಯಾದ ಅರ್ಜಿಗಳನ್ನು ಪರಿಶೀಲಿಸಿ ಕ್ಲಸ್ಟರ್‌ಗಳಿಗೆ ಸೋಲಾರ್ ಉಪಕರಣಗಳನ್ನು ಅಳವಡಿಸಲು ಮಂಜೂರಾತಿ ನೀಡಿ ಕಾರ್ಯಾದೇಶ ಹೊರಡಿಸುವ ಅಧಿಕಾರ ನಿಗಮದ ವ್ಯವಸ್ಥಾಪಕ ನಿರ್ದೇಶಕರದ್ದಾಗಿರುತ್ತದೆ.
5. ಸೋಲಾರ್ ಉಪಕರಣ ಸ್ಥಾಪಿಸಲು ಅಗತ್ಯವಿರುವ ಸ್ಥಳಾವಕಾಶ ಮತ್ತು ಕಟ್ಟಡವನ್ನು ಫಲಾನುಭವಿ / ಸಂಸ್ಥೆಯು ಒದಗಿಸತಕ್ಕದ್ದು.
6. ಸೋಲಾರ್ ಸಂಸ್ಥೆಯ ಮೂಲಕ ಸ್ಥಾಪಿಸಲಾದ ಸೋಲಾರ್ ಉಪಕರಣದ ನಿರ್ವಹಣೆಯ ಜವಾಬ್ದಾರಿಯನ್ನು ಸೋಲಾರ್ ಸಂಸ್ಥೆಯು ಹೊರಬೇಕಾಗುತ್ತದೆ. ಈ ಬಗ್ಗೆ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ನಿಗಮದೊಂದಿಗೆ ಸೋಲಾರ್ ಸಂಸ್ಥೆಯು ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
7. ಈ ಯೋಜನೆಯ ಅವಧಿಯು ಕನಿಷ್ಠ 5 ವರ್ಷಗಳವರೆಗೆ ಇರತಕ್ಕದ್ದು ಹಾಗೂ ಯೋಜನೆಯಡಿ ಸರಬರಾಜು ಆದ ಉಪಕರಣಗಳನ್ನು ಫಲಾನುಭವಿ / ಸಂಸ್ಥೆಯು ಯಾವುದೇ ರೀತಿಯ ಪರಭಾರೆ ಅಥವಾ ಮಾರಾಟ ಮಾಡತಕ್ಕದ್ದಲ್ಲ. ಹಾಗೂ ಉಪಕರಣಗಳನ್ನು ಫಲಾನುಭವಿ / ಸಂಸ್ಥೆ ಮತ್ತು ನಿಗಮದ ಹೆಸರಿನಲ್ಲಿ ನೊಂದಾಯಿಸತಕ್ಕದ್ದು.

<u>ಸೌರಶಕ್ತಿ ಉಪಕರಣಗಳನ್ನು ಸ್ಥಾಪಿಸಲು ಸರಬರಾಜು ಸಂಸ್ಥೆಯ ಆಯ್ಕೆ :</u>

ಸೌರಶಕ್ತಿ ಉಪಕರಣಗಳನ್ನು ಸರಬರಾಜು ಮಾಡಲು ಸೋಲಾರ್ ಸರಬರಾಜು ಸಂಸ್ಥೆಯನ್ನು ಈ ಮುಂದಿನ ಯಾವುದಾದರೂ ಕ್ರಮದ ಮೂಲಕ ಆಯ್ಕೆ ಮಾಡತಕ್ಕದ್ದು.

i. ಇ–ಪ್ರಾಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯುವುದು.
ii. ಡಿಜಿಎಸ್ ಆಂಡ್ ಡಿ ರಲ್ಲಿ ನೊಂದಾಯಿತರಾದ ಸಂಸ್ಥೆಗಳನ್ನು ಆಯ್ಕೆ ಮಾಡುವುದು.
iii. ಕೇಂದ್ರ ಸರ್ಕಾರದ ಎಂಎನ್‌ಆರ್‌ಇ ಇಲಾಖೆಯಿಂದ ಗುರುತಿಸಲ್ಪಟ್ಟ ಎಂಪ್ಯಾನೆಲ್ಡ್ ಸಂಸ್ಥೆಗಳನ್ನು ಆಯ್ಕೆ ಮಾಡುವುದು.
iv. ವಿದ್ಯುತ್ ಸರಬರಾಜು ಸಂಸ್ಥೆಗಳಲ್ಲಿ ನೊಂದಾಯಿತರಾಗಿರುವ ಅಧಿಕೃತ ಸರಬರಾಜುದಾರ ಸಂಸ್ಥೆಯನ್ನು ಆಯ್ಕೆ ಮಾಡುವುದು.
v. ರಾಜ್ಯ ಸರ್ಕಾರದ ಕೆಟಿಪಿಪಿ ಅಧಿನಿಯಮದಡಿ ವಿನಾಯಿತಿ ಹೊಂದಿರುವ ಸಂಸ್ಥೆಗಳಲ್ಲಿ ಯಾವುದಾದರೂ ಸಂಸ್ಥೆಯನ್ನು ಆಯ್ಕೆ ಮಾಡುವುದು.

**ಅನುದಾನ ಬಿಡುಗಡೆ ಹಂತಗಳು:**

1. ಕಾರ್ಯಾದೇಶ ನೀಡಲಾದ ಸೋಲಾರ್ ಸಂಸ್ಥೆಗೆ ಮುಂಗಡವಾಗಿ ಯಾವುದೇ ಹಣವನ್ನು ಮುಂಗಡವಾಗಿ ಬಿಡುಗಡೆ ಮಾಡಲಾಗುವುದಿಲ್ಲ.
2. ಸೋಲಾರ್ ಉಪಕರಣ ಸ್ಥಾಪಿಸಿದ ಪ್ರಗತಿಯನ್ನು ಆಧರಿಸಿ, ಹಾಗೂ ಉಪಕರಣದ ಗುಣಮಟ್ಟದ ಕಾರ್ಯಕ್ಷಮತೆಯನ್ನು ಪರಿಶೀಲಿಸಿದ ನಂತರ ಶೇ.75 ರಷ್ಟು ಅನುದಾನ ಬಿಡುಗಡೆ ಮಾಡತಕ್ಕದ್ದು.
3. ಸೋಲಾರ್ ಉಪಕರಣಗಳನ್ನು ಅಳವಡಿಸಿದ ಬಗ್ಗೆ ಕಾರ್ಯ ಮುಕ್ತಾಯ ವರದಿಯೊಂದಿಗೆ 3ನೇ ವ್ಯಕ್ತಿಯ ದೃಢೀಕರಣ ವರದಿಯನ್ನು ಸಲ್ಲಿಸಿದ ನಂತರ ಉಳಿದ ಶೇ.25 ರಷ್ಟು ಅನುದಾನ ಬಿಡುಗಡೆ ಮಾಡತಕ್ಕದ್ದು.
4. ಮಂಜೂರಾದ ಪ್ರೋತ್ಸಾಹಧನವನ್ನು ಸೋಲಾರ್ ಉಪಕರಣ ಪೂರೈಸಿದ ಸಂಸ್ಥೆಗೆ ನೇರವಾಗಿ ಬಿಡುಗಡೆ ಮಾಡತಕ್ಕದ್ದು.
5. ಸರ್ಕಾರವು ಅನುಮೋದಿಸಿದ ನವೀಕೃತ ಇಂಧನ ಸಂಸ್ಥೆ ಪತಿಯಿಂದ ಯೋಜನೆಯ ಅಂತಿಮ ಕಾಮಗಾರಿಯ ದೃಢೀಕರಣ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

**ಯೋಜನೆಯ ಅನುಷ್ಠಾನದ ಪರಿಮಿತಿಗಳು:**

ಈ ಯೋಜನೆಯನ್ನು ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸಲಿದ್ದು, ಈ ಯೋಜನೆಯ ಅನುಷ್ಠಾನದಲ್ಲಿ ಅಗತ್ಯ ಬದಲಾವಣೆಗಳನ್ನು ತರುವ ಅಥವಾ ಯಾವುದೇ ಹಂತದಲ್ಲಿ ಯೋಜನೆಯನ್ನು ಸ್ಥಗಿತಗೊಳಿಸುವ ಅಧಿಕಾರ ರಾಜ್ಯ ಸರ್ಕಾರವು ಹೊಂದಿರುತ್ತದೆ ಹಾಗೂ ಯೋಜನೆಯ ಅನುಷ್ಠಾನದಲ್ಲಿ ಉಂಟಾಗುವ ಯಾವುದೇ ಗೊಂದಲಗಳ ಬಗ್ಗೆ ಸರ್ಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.

**(ಕೆ. ಬೋರಲಿಂಗಯ್ಯ)** 23-8-2016
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ